ಬಂದರೂ ಕೂಡ ಆ ಬಗ್ಗೆ ಯಾವ ತರಹ ಕಾರ್ಯಕ್ರಮವನ್ನೂ ತೆಗೆದ ಕೊಂಡಿರುವು ದಿಲ್ಲ ಇದಕ್ಕೆ ಕಾರಣವೇನು ?

†ಶ್ರೀ ಅಜೀಜ್ ಸೇಟ್.—ಅಲ್ಲಿ ಸೂಕ್ತ ಜಾಗ ಸಿಕ್ಕಿಲ್ಲ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ಅದಕ್ಕೆ ಬೇಕಾವ ಯೋಗ್ಯ ನಿವೇಶನ ದೊರಕಿಸಿ ಕೊಳ್ಳಲು ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಅಜೀಜ್‌ಸೇಟ್ —ಅದಕ್ಕೆ ಬೇಕಾದ ಜಾಗವನ್ನು ಮಾನ್ಯ ಸದಸ್ಯರು ಕೊಡಿಸಿಕೊಟ್ಟರೆ ಅಲ್ಲಿ ಬಸ್ ಷೆಲ್ಟರ್ ಹಾಕಿಕೊಡುತ್ತೇವೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ಅಲ್ಲಿ ಅದಕ್ಕೆ ಬೇಕಾದ ಜಾಗವನ್ನು ಒದಗಿಸಿಕೊಡುವ ಪ್ರಯತ್ನ ಮಾಡಿದರೆ ಅಲ್ಲಿ ಆದಷ್ಟು ಜಾಗ್ರತೆ ಬಸ್ ಷೆಲ್ಟರ್ ಹಾಕಿಸಿಕೊಡುತ್ತೀರಾ ?

ಶ್ರೀ ಅಜೀಜ್‌ಸೇಟ್.—ಮಾನ್ಯ ಸದಸ್ಯರು ಜಾಗವನ್ನು ಕೊಡಿಸಿಕೊಟ್ಟರೆ ತಕ್ಷಣ ಬಸ್ ಷೆಲ್ಟರ್ ಹಾಕಿಸಿಕೊಡುತ್ತೇವೆ.

MURDER OF SRI BABULAL AT HIRIYUR

454. Sri H. T. KRISHNAPPA (Nagamangala) and Sri BAPU GOWDA (Shahapur).—Will the Chief Minister be pleased to state.—

(a) whether Government is aware of the murder of one Sri Babulal at Hiriyur on 7th May 1973 ;

(b) if so, the reasons for the murder ;

(c) whether accused are charge-sheeted by the police ;

(d) if not, the reasons for the same ?

Sri H. M. CHANNABASAPPA (Minister for Public Works and Electricity) [on behalf of Sri D. DEVARAJ URS (Chief Minister)].—

(a) Yes.

(b) The motive for the murder is not yet establi hed.

(c) No.

(d) The case is still under investigation.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸ್ವಾಮಿ ಈ ಹಿರಿಯೂರಿನಲ್ಲಿ ನಡೆದ ಬಾಬುಲಾಲ ಎಂಬುವವರ ಕೊಲೆಯ ಸಂಬಂಧದ ಮೊಕದ್ದಮೆಯಲ್ಲಿ ಅಪರಾಧಿಗಳು ಯಾರು ಯಾರು ಅವರನ್ನು ಅರೆಸ್ಟ್ ಮಾಡಿದ ತಾರೀಖನ್ನು ಹೇಳುತ್ತೀರಾ ?

†ಶ್ರೀ ಎಚ್. ಎಂ. ಚನಬಸಪ್ಪ.— ಅಪರಾಧಿಗಳು ಇನ್ನೂ ಪತ್ತೆಯಾಗಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಹಾಡು ಹಗಲಿನಲ್ಲಿ ಈ ಖೂನಿ ನಡೆದಿದೆ. ದರೋಡೆ ನಡೆದಿದೆ. ಇದು ನಡೆದು ಈಗಾಗಲೇ ೪ ತಿಂಗಳಾಗಿವೆ. ಇನ್ನೂ ಆ ಅಪರಾಧಿಗಳನ್ನು ಹಿಡಿದು ಅರೆಸ್ಟ್ ಮಾಡಿಲ್ಲ. ಆ ಅಪರಾಧಿಗಳು ನಿಮ್ಮ ಪಕ್ಷದವರು ಎಂದು ಅವರನ್ನು ವಹಿಸಿಕೊಂಡಿದ್ದೀರಾ ?

Sri H. M. CHANNABASAPPA.— I object the manner in which the question is put. He cannot make such an argument.

ಶ್ರೀ ಎಚ್. ಟಿ. ಕೃಷ್ಣಪ್ಪ – ಇದು ಆರ್ಗ್ಯುಮೆಂಟ್ ಪ್ರಶ್ನೆ ಅಲ್ಲ. ಆ ಅಪರಾಧಿಗಳು ನಿಮ್ಮ ಪಕ್ಷದ ಕೆಲವು ದೊಡ್ಡ ಪ್ರಭಾವಶಾಲಿಗಳ ಆಶ್ರಯದಲ್ಲಿರುವುದರಿಂದ ಅವರನ್ನು ಇದುವರೆಗೂ ಬಂಧಿಸಿಲ್ಲ. ಅವರ ಮೇಲೆ ಚಾರ್ಜ್‌ಷೀಟ್ ಹಾಕಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಮಾನ್ಯ ಸದಸ್ಯರ ಅಭಿಪ್ರಾಯ ಶುದ್ಧ ತಪ್ಪು

ಶ್ರೀ ಎಚ್. ಟಿ. ಕೃಷ್ಣಪ್ಪ — ಅಲ್ಲಿಯ ಸ್ಥಳೀಯ ಪೋಲೀಸ್ ಅಧಿಕಾರಿಗಳು ಅಲ್ಲಿಯ ಕೆಲವು ಸ್ಥಳೀಯರ ಪ್ರಭಾವಕ್ಕೆ ಒಳಗಾಗಿದ್ದಾರೆ ಎಂದು ದೂರು ಬಂದಿರುವುದರಿಂದ ಅದಕ್ಕೆ ಒಂದು ವಿಶೇಷ ಪೋಲೀಸ್ ಸಿಬ್ಬಂದಿಯನ್ನು ನೇಮಿಸಿ ತನಿಖೆ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನಬಸಪ್ಪ.— ಆ ರೀತಿ ಆಪಾದನೆಗಳು ಬಂದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈ ಕೇಸಿನಲ್ಲಿ ಸಿ. ಐ. ಡಿ. ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಆ ಬಗ್ಗೆ ಆಪಾದನೆಗಳು ಏನಾದರೂ ಬಂದಿವೆಯೇ ?

ಶ್ರೀ ಎಚ್. ಎಂ ಚನ್ನಬಸಪ್ಪ — ಈ ಸಂಬಂಧದಲ್ಲಿ ಒಂದು ಅರ್ಜಿ ಬಂದಿದೆ. ಆದ್ದರಿಂದ ಅನುಮಾನಕ್ಕೆ ಎಡೆ ಇಲ್ಲದಂತೆ ಇರಲಿ ಎಂದು ಈ ಬಗ್ಗೆ ಸಿ. ಐ. ಡಿ. ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ.

ಅಧ್ಯಕ್ಷರು — ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.